ಶ್ರೀ ವಾಟಾಳ್ ನಾಗರಾಜ್:- ಚಾಮರಾಜನಗರ - ಮೆಟ್ಟು ಪಾಳ್ಯಂ ಬ್ರಾಡ್‌ಗೇಜ್ 15 ವರ್ಷಗಳಿಂದ ಆಗಿಲ್ಲ: ಯಲಹಂಕ - ಬಂಗಾರುಪೇಟೆ ನಡುವೆ ಇರುವ ಸಣ್ಣ ರೈಲನ್ನು ಬ್ರಾಡ್‌ಗೇಜ್ ಆಗಿ ಪರಿವರ್ತನೆ ಮಾಡುವ ಕೆಲಸ ಆಗಿಲ್ಲ. ವರ್ತುಲ ರೈಲ್ವೆ ಕೆಲಸ ಬೆಂಗಳೂರು ನಗರದಲ್ಲಿ ಪ್ರಾರಂಭವಾಗಿಲ್ಲ ಈ ರೀತಿ ಹಲವಾರು ಕೆಲಸಗಳು ಆಗಿಲ್ಲ. ರೈಲ್ವೆ ಇಲಾಖೆಯಿಂದ ನಿಜವಾಗಿ ನಮಗೆ ಅನ್ಯಾಯವಾಗುತ್ತಾ ಇದೆ.

ಕೇಂದ್ರದ ಮಲತಾಯಿ ಧೋರಣೆಯನ್ನು ನಾನು ವಿರೋಧಿಸಿ ಪ್ರತಿಭಟನೆ ಮಾಡುತ್ತಿದ್ದೇನೆ. ಅದು ಅತ್ಯಂತ ಪ್ರಮುಖವಾದ ವಿಚಾರ. ಕೇಂದ್ರ ಸರ್ಕಾರ ಕರ್ನಾಟಕವನ್ನು ಕಡೆಗಣಿಸಿ ಕರ್ನಾಟಕವನ್ನು ಕೊನೆಯ ಭಾಗವಾಗಿ ಕಂಡಿದ್ದಾರೆ. ಆದುದರಿಂದ ನಾನು ಕಪ್ಪು ಬಾವುಟದ ಪ್ರದರ್ಶನವನ್ನು ಈ ಸದನದಲ್ಲಿ ಮಾಡಲೇಬೇಕಾಗುತ್ತದೆ. ತಾವು ತಪ್ಪು ತಿಳಿದುಕೊಳ್ಳಬಾರದು. ಇದರಿಂದ ನಮಗೆ ಬಹಳ ನೋವಾಗಿದೆ.

ಅಧ್ಯಕ್ಷರು:-ನಿಮಗೆ ನೋವಾಗಿದೆ ಎಂದು ಸದನಕ್ಕೂ ಆರ್ಥವಾಗಿದೆ, ನಮಗೂ ಆರ್ಥವಾಗಿದೆ. ಸಭೆಯ ಒಟ್ಟಾರೆ ಅಭಿಪ್ರಾಯ ಬಂದರೆ ನಿಮ್ಮ ನೋವಿಗೆ ಸ್ವಲ್ಪವಾದರೂ ಸಾಂತ್ವನ ಸಿಕ್ಕುತ್ತದೆ ಎಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:-ಈ ವಿಚಾರದಲ್ಲಿ ತಮ್ಮ ವಿರುದ್ಧವೂ ಅಲ್ಲ, ಯಾರ ವಿರುದ್ಧವೂ ಅಲ್ಲ. ಕೇಂದ್ರ ಸರ್ಕಾರ ಮೊದಲಿನಿಂದಲೂ ಮಲತಾಯಿ ಧೋರಣೆ ತೋರುತ್ತಿದೆ. ನಾನು ಇದನ್ನು ಸುಮ್ಮನೆ ಬಿಟ್ಟುಕೊಂಡು ಹೋಗುತ್ತಿದ್ದರೆ ಆಗುವುದಿಲ್ಲ. ಆದಕ್ಕೋಸ್ಕರ ಕೇಂದ್ರ ಸರ್ಕಾರದ ಮಲತಾಯಿ ಧೋರಣೆಯನ್ನು ಈ ಸದನದ ಮೂಲಕ ಖಂಡಿಸುತ್ತೇನೆ. ಒಂದೇ ಸಮನೆ ಕನ್ನಡಿಗರನ್ನು, ಕರ್ನಾಟಕದವರನ್ನು ಕಡೆಗಣಿಸಿ ಕಾಲ ಕಸದ ರೀತಿಯಲ್ಲಿ ಕಾಣುತ್ತಾ ಇದ್ದಾರೆ. ಈ ಬಗ್ಗೆ ನಾನು ನನ್ನ ಪ್ರತಿಭಟನೆಯನ್ನು ಕಪ್ಪು ಬಾವುಟದ ಪ್ರದರ್ಶನ ಮಾಡುವುದರ ಮೂಲಕ ಸಭಾತ್ಯಾಗ ಮಾಡುತ್ತಿದ್ದೇನೆ. ಅದು ಬಹಳ ಅನ್ಯಾಯ. ಮೊದಲಿನಿಂದಲೂ ಅನ್ಯಾಯ ನಡೆಯುತ್ತಿದೆ. ಹೀಗಾಗಬಾರದು., ಕೇಂದ್ರ ಸರ್ಕಾರದ ಬಗ್ಗೆ ನಾನು ಮೊದಲಿನಿಂದಲೂ ಹೇಳುತ್ತಿದ್ದೇನೆ. ಇದು ಒಂದೇ ಸಮನೆ ನಡೆಯುತ್ತಾ ಇದೆ. ನಮ್ಮ ಪಾರ್ಲಿಮೆಂಟಿನ ಸದಸ್ಯರಿಗೆ ಹೇಳಿದ್ದೇನೆ. ಇದರ ಬಗ್ಗೆ ಒಬ್ಬರೂ ಚಿತ್ತಾರ ಎತ್ತುವುದಿಲ್ಲ ಎಂದು ಹೇಳಿದರೆ ನಾವು ಎಲ್ಲಿ ಹೇಳಬೇಕು ಈ ಧ್ವನಿಯನ್ನು? ನಮ್ಮವರೆ ರೈಲ್ವೆ ಮಂತ್ರಿಗಳಾಗಿದ್ದಾರೆ. ನಮ್ಮವರೇ ಅಲ್ಲಿ ಮೊದಲಿನಿಂದಲೂ ಇದ್ದಾರೆ. ಹನುಮಂತಯ್ಯನವರು, ದಾಸಪ್ಪನವರು, ಟಿ.ಎ. ಪೈಯವರು ನಮ್ಮ ಅನೇಕ ಜನ ಅಲ್ಲಿದ್ದರೂ ಒಂದು ಅಂಗುಲ ರೈಲ್ವೆಲೈನನ್ನು ಇವತ್ತು ನಮಗೆ ಪಡೆಯುವುದಕ್ಕೆ ಆಗುತ್ತಾ ಇಲ್ಲ. ಈ ಒಂದು ದೃಷ್ಟಿಯಿಂದ ನನಗೆ ಬಹಳ ನೋವಾಗಿದೆ. ಕೇಂದ್ರದ ಮಲತಾಯಿ ಧೋರಣೆಯನ್ನು ಧಿಕ್ಕರಿಸಿ ಕೇಂದ್ರದ ವಿರುದ್ಧ ಕಪ್ಪು ಬಾವುಟದ ಪ್ರದರ್ಶನವನ್ನು ಸಭೆಯ ಮೂಲಕ ಮಾಡಿ ಸಭಾತ್ಯಾಗ ಮಾಡುತ್ತಾ ಇದ್ದೇನೆ. ಕೇಂದ್ರದ ನೀತಿ ವಿರುದ್ಧ ನನ್ನ ಪ್ರತಿಭಟನೆ ಇದ್ದೇ ಇದೆ. ಯಾವಾಗಲೂ ಇದೆ. ಮುಂದೆಯೂ ಇದೆ. ಈ ವಿಚಾರದಲ್ಲಿ ಮಾತ್ರ ರಾಜಿ ಆಗುವುದಕ್ಕೆ ತಯಾರು ಇಲ್ಲ. ತಮಗೆ ಗೊತ್ತಿದೆ. ಈ ಬಗ್ಗೆ ನಾನು ಮೊದಲಿನಿಂದಲೂ ಹೇಳುತ್ತಾ ಇದ್ದೇನೆ. ಈ ಹೋರಾಟಗಳು ನಿಮಗೆ ಗೊತ್ತೇ ಇದೆ. ಕೇಂದ್ರ ಸರ್ಕಾರ ಅನ್ಯಾಯ ಮಾಡುತ್ತಾ ಇದೆ.

ಶ್ರೀ ವಾಟಾಳ್ ನಾಗರಾಜ್ ಅವರು ಕಪ್ಪು ಬಾವುಟ ಪ್ರದರ್ಶಿಸುತ್ತಾ ಸಭಾತ್ಯಾಗ ಮಾಡಿದರು.

ವರದಿಯನ್ನೊಪ್ಪಿಸುವುದು

ಶ್ರೀ ಜಿ. ರಾಮಕೃಷ್ಣ: ಮೈಸೂರು ಪೆಯಿಂಟ್ಸ್ ಮತ್ತು ವಾರ್ನಿಶ್ ನಿಯಮಿತ ಮೈಸೂರು, ಮೇಲಿನ ಸಾರ್ವಜನಿಕ ಉದ್ದಿಮೆಗಳ (8ನೆಯ ವಿಧಾನ ಸಭೆ) ಸಮಿತಿಯ 32ನೇ

ವರದಿಯಲ್ಲಿ ಮಾಡಲಾಗಿರುವ ಶಿಫಾರಸ್ಸುಗಳ ಮೇಲೆ ಸರ್ಕಾರದವರು ಕೈಕೊಂಡ ಕ್ರಮದ ಮೇಲಿನ 54ನೇ ವರದಿಯನ್ನು ಮಂಡಿಸುತ್ತೇನೆ.

ಅಧ್ಯಕ್ಷರು: ವರದಿಯನ್ನು ಒಪ್ಪಿಸಲಾಯಿತು.

SRI AZEEZ SAIT : Sir, I have moved a privilege motion against hon.member Mr.Yediyurappa. Further to improve, his own counterpart one Mr.Marthi Rao Pawar, also issued the same statement in Mysore.

MR. SPEAKER : Would you kindly send it to me and give me time till tomorrow?

ಶ್ರೀ ಬಿ.ಎಸ್. ಯಡಿಯೂರಪ್ಪ: ನಾನು ತಮ್ಮ ಕೊಠಡಿಗೆ ಬಂದು ಅತ್ಯಂತ ಪ್ರಮುಖವಾದ ವಿಷಯವನ್ನು ಪ್ರಸ್ತಾಪಿಸಿದ್ದೇನೆ.

2) ವಿದ್ಯುತ್ ಅಡೆತಡೆಯಿಂದ ಜನಸಾಮಾನ್ಯರಿಗೆ ತೊಂದರೆ

ಶ್ರೀ ಆರ್.ವಿ. ದೇಶಪಾಂಡೆ:– ಕೆ.ಇ.ಬಿ.ಯಿಂದ ಜನಸಾಮಾನ್ಯರಿಗೆ, ಕೈಗಾರಿಕೆಗಳಿಗೆ ಏನು ಆನಾನುಕೂಲತೆ ಆಗುತ್ತಾ ಇದೆ, ಅದರ ಬಗ್ಗೆ ಇಂದು 1 ಚರ್ಚೆ ಮಾಡಬೇಕಾಗಿದೆ. ಇದರಿಂದ ಮತ್ತೊಂದು ಗಂಭೀರವಾದ ಸಮಸ್ಯೆ ನಿರ್ಮಾಣವಾಗಿದೆ. ಈಗಾಗಲೇ ಈ ಪವರ್ ಫೇಲ್ಯೂರ್, ಷೆಡ್‌ಡೌನ್ ಆಗಿದೆ; threat to/ ಶರಾವತಿ ಹೈಡಲ್ ಸ್ಟೇಶನ್ಸ್ 3 sluice gates are there. ಒಂದು ಕೆಟ್ಟು ಹಾಳಾಗಿದೆ. ಮತ್ತೊಂದು ಗೇಟ್ ಅಂಡರ್ ರಿಪೇರಿ. ಅದು ಇನ್ನು ರಿಪೇರಿ ಆಗಿಲ್ಲ. ಡಿಸೆಂಬರ್ 17ರಿಂದ ಒಂದೇ ಒಂದು ಗೇಟ್ ಏನು ಇತ್ತು ಯಾವ ಗೇಟಿನಿಂದ ರಿಸರ್ವಾಯರಿಗೆ ವಾಟರ್ ಫ್ಲೋ ಆಗುತ್ತಿತ್ತು ಅದೂ ಸಹ ಔಟ್ ಆಫ್ ಆರ್ಡರ್ ಆಗಿದೆ. ನನ್ನ ಇನ್‌ಫರ್‌ಮೇಷನ್ ಪ್ರಕಾರ ಕರ್ನಾಟಕ ಪವರ್ ಕಾರ್ಪೊರೇಷನ್ ಈ ಒಂದು ವಿಷಯದ ಬಗ್ಗೆ ಸೀರಿಯಸ್ ಆಗಿಲ್ಲ. ಏಕೆಂದರೆ ನವೆಂಬರ್‌ನಲ್ಲಿ ಸಾಕಷ್ಟು ಮಳೆ ಆಗುತ್ತಾ ಇತ್ತು. ಮಳೆ ಆಗಿ ರಿಸರ್ವಾಯರ್‌ನಲ್ಲಿ ನೀರು ಬಂದಿತ್ತು. ಹಾಗಾಗಿ ಇವತ್ತು ಸರ್ಕಾರ ಇಮ್ಮಿಡಿಯೇಟ್ ಕ್ರಮ ತೆಗೆದುಕೊಂಡಿಲ್ಲವಾದರೆ ಗೇಟ್ ಸ್ಟೀಲ್ ಗೇಟ್ ಇಮ್ಮಿಡಿಯೇಟ್‌ಆಗಿ ರಿಪೇರಿ ಆಗಿಲ್ಲ ಎಂದರೆ ಕರ್ನಾಟಕದಲ್ಲಿ ವಿದ್ಯುಚ್ಛಕ್ತಿ ಇಲ್ಲದಂತೆ ಆಗಬಹುದು. Totally it will be dark ನಮ್ಮ 27.5 ಮೆಗವ್ಯಾಟ್ ಕ್ಯಾಪಸಿಟಿ ಪವರ್ ಹೌಸ್ ಇದೆ ಅದರ ಬಗ್ಗೆ ಟೂ ಯುನಿಟ್ಸ್ ಆಫ್ 27.5 ಲಿಂಗನಮಕ್ಕಿ ಜಲಾಶಯದಲ್ಲಿ ಪಕ್ಕದಲ್ಲಿ ಒಂದು ಫೇಲ್ಯೂರ್ ಆಗಿದೆ, ಒಂದು ನಡೆಯುತ್ತಾ ಇದೆ. ಆದರೆ ಅದೂ ಫೇಲ್ಯೂರ್ ಆದರೆ ಮತ್ತೆ ಈ ಸ್ಟೀಲ್ ಗೇಟ್ ಪ್ರಾಬ್ಲಮಿನಿಂದ The whole of Karnataka will be on dark. ಹಾಗಾಗಿ ನಾನು ಸರ್ಕಾರಕ್ಕೆ ತಮ್ಮ ಮುಖಾಂತರ ತಿಳಿಸುವುದಕ್ಕೆ ಇಚ್ಛಿಪಡುತ್ತೇನೆ. ಸರ್ಕಾರದವರು ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ ಮತ್ತು ಫ್ರೀಕ್ವೆಂಟಾಗಿ ಈ ಸ್ಟೀಲ್ ಗೇಟ್ ಪರಿಸ್ಥಿತಿ ಏಕೆ ಆಗುತ್ತಾ ಇದೆ. ಇದಕ್ಕೆ ಯಾವ ಅಧಿಕಾರಿ ಕಾರಣ ಹಾಗೂ ತಾವು ಯಾವ ತರಹದ ಕ್ರಮ ತೆಗೆದುಕೊಳ್ಳುತ್ತೀರಿ ಎಂಬ ಬಗ್ಗೆ ಅಧ್ಯಕ್ಷರ ಮುಖಾಂತರ ಸರ್ಕಾರಕ್ಕೆ ಕೇಳಲಿಚ್ಛಿಸುತ್ತೇನೆ.

ರಾಜ್ಯದ ಜನರಲ್ ಆಸ್ಪತ್ರೆಗಳಲ್ಲಿ ಡಾಕ್ಟರುಗಳ ಕೊರತೆ

ಶ್ರೀ ಬಿ.ಎಸ್. ಯಡಿಯೂರಪ್ಪ:– ಅಧ್ಯಕ್ಷರೆ, ಅತ್ಯಂತ ಪ್ರಮುಖವಾದಂತಹ ಒಂದು ವಿಷಯವನ್ನು ತಮ್ಮ ಗಮನಕ್ಕೆ ನಾನು ತರಬೇಕು ಎಂದು ತಮ್ಮ ಕೊಠಡಿಯಲ್ಲಿ ಬಂದು ಮಾತನಾಡಿದೆ. ಕರ್ನಾಟಕ ರಾಜ್ಯದಲ್ಲಿ ಅನೇಕ ಜನರಲ್ ಆಸ್ಪತ್ರೆಗಳಲ್ಲಿ ಡಾಕ್ಟರುಗಳು ಇಲ್ಲದೆ ಒಂದು ರೀತಿ ದೇವರು ಇಲ್ಲದ ಗುಡಿಯಂತೆ ಆಗಿದೆ ಈ ಆಸ್ಪತ್ರೆಗಳ ಸ್ಥಿತಿ. ನಾನು ವಿವರಕ್ಕೆ ಹೋಗುವುದಿಲ್ಲ. ಬೀರೂರಿನಲ್ಲಿ ಕಳೆದ ಒಂದು ವಾರದಿಂದ ಧರಣಿ ಸತ್ಯಾಗ್ರಹ